# ಕೊಳ್ಳುಬಾಕ ಪ್ರವೃತ್ತಿ

'ಆಲಿಬಾಬ ಮತ್ತು ನಲ್ವತ್ತು ಮಂದಿ ಕಳ್ಳರು' ಎಂಬ ರೋಚಕ ಕಥೆ ಯಾರಿಗೆ ಗೊತ್ತಿಲ್ಲ? ಆ ಕಥೆಯಲ್ಲಿ ಆಲಿಬಾಬಾನ ಅಣ್ಣ ಖಾಸಿಂ ತನ್ನ ತಮ್ಮ ಪಡೆದುದಕ್ಕಿಂತಲೂ ಹೆಚ್ಚು ಸಂಪತ್ತನ್ನು ತನ್ನದಾಗಿಸಿಕೊಳ್ಳುವ ಉದ್ದೇಶದಿಂದ ಕಳ್ಳರ ಗುಹೆಯನ್ನು ಪ್ರವೇಶಿಸುತ್ತಾನೆ; ಅಲ್ಲಿ ಸಂಗ್ರಹವಾಗಿದ್ದ ರಾಶಿ ರಾಶಿ ಹಣ, ಮುತ್ತು ರತ್ನ, ಆಭರಣ– ಎಲ್ಲವನ್ನೂ ಕಂಡು, ಅವನಲ್ಲಿದ್ದ ದುರಾಶೆ ಕೆರಳುತ್ತದೆ. ಮೂಟೆ ಮೂಟೆಗಳಲ್ಲಿ ಅವನ್ನು ತುಂಬಿಸಿಕೊಂಡು ಗುಹೆಯಿಂದ ಹೊರಗೆ ಬರಬೇಕೆನ್ನುವಾಗ, ಗುಹೆಯ ಬಾಗಲು ತೆರೆಯುವಂತೆ ಮಾಡುವ ಸಂಕೇತ ಪದ (Pass word) ಮರೆತೇ ಹೋಗಿರುತ್ತದೆ, ಹೀಗಾಗಿ ಆತ ಗುಹೆಯಿಂದ ಹೊರಬರಲಾಗದೇ ಕಳ್ಳರ ಕೈಯಲ್ಲಿ ಹತನಾಗುತ್ತಾನೆ.

ಇತ್ತೀಚಿನ ದಶಕಗಳಲ್ಲಿ ನಗರ ವಾಸಿಗಳಲ್ಲಿ ಉಲ್ಬಣಿಸುತ್ತಿರುವ ಕೊಳ್ಳುಬಾಕ ಪ್ರವೃತ್ತಿಯನ್ನು ಕುರಿತು ಯೋಚಿಸಿದಾಗ ಖಾಸಿಂನ ಪಾಡು ನೆನಪಾಗುತ್ತದೆ, ನಮ್ಮ ಹಿಂದಿನ ಪೀಳಿಗೆಯವರು ದೈನಂದಿನ ಬದುಕಿಗೆ ಅತ್ಯಂತ ಅಗತ್ಯವಿರುವ ಪದಾರ್ಥಗಳನ್ನಷ್ಟೇ ಅಂಗಡಿಗಳಿಂದ ಖರೀದಿಸಿ ತರುತ್ತಿದ್ದರು. ಆದರೆ ಈ ಕಾಲದಲ್ಲಿ– ಮುಖ್ಯವಾಗಿ ನಗರಗಳಲ್ಲಿ– ಅಂಗಡಿಗಳಿಗೆ ಹೋಗಿ, ನಮಗೆ ಬೇಕಾದ ಪದಾರ್ಥಗಳ ಪಟ್ಟಿ ಕೊಟ್ಟೋ, ಅಥವಾ ಬಿಡಿ ಬಿಡಿಯಾಗಿ ಇಂಥಿಂಥಾ ವಸ್ತುಗಳು ಬೇಕೆಂದು ಹೇಳಿಯೋ, ಅಂಗಡಿಯ ಮಾಲೀಕನಿಂದ ಅವನ್ನು ಪಡೆಯಬೇಕಾದ ಪರದಾಟವಿಲ್ಲ. ಮಾಲ್‌ಗಳಲ್ಲಿ ಅಥವಾ ದೊಡ್ಡ ಅಂಗಡಿಗಳಲ್ಲಿ ನಾವೇ ನೇರವಾಗಿ ನಮಗೆ ಇಷ್ಟಬಂದ ವಸ್ತುಗಳನ್ನು ಆರಿಸಿ, ತಳ್ಳುಗಾಡಿಗಳಲ್ಲಿ ತುಂಬಿಕೊಂಡು, ಹಣ ಪಾವ್ತಿಸಿ ಮನೆಗೊಯ್ಯಬಹುದು. ನಾವು ಕೊಂಡ ಪದಾರ್ಥಗಳನ್ನು ಅಂಗಡಿಯವರೇ ನಮ್ಮ ಮನೆಗೆ ವಿತರಣೆ ಮಾಡುವ ವ್ಯವಸ್ಥೆಯೂ ಇದೆ. ಈ ಸೌಲಭ್ಯಗಳಿಂದಾಗಿ ನಾವು ನಮಗೆ ಸಿಗುವ ಆಯ್ಕೆಯ ಸ್ವಾತಂತ್ರ್ಯದಿಂದ ಖುಷಿಪಡುತ್ತೇವೆ; ಈ ಖುಷಿಯಲ್ಲೇ ನಮಗೆ ತೀರಾ ಅಗತ್ಯವಿಲ್ಲದ ವಸ್ತುಗಳನ್ನು ಕೊಳ್ಳಬೇಕೆನ್ನುವ ಪ್ರಲೋಭನೆಗೆ ಒಳಗಾಗುತ್ತೇವೆ. ನಮ್ಮೆದುರೇ ಅಂದವಾಗಿ, ಆಕರ್ಷಕವಾಗಿ ಜೋಡಿಸಲ್ಪಟ್ಟಿರುವ ವಿವಿಧ ವಸ್ತುಗಳನ್ನು ಕಂಡಾಗ, ಆಲಿಬಾಬನ ಅಣ್ಣ ಖಾಸಿಂನಂತೆ 'ಅದೂ ಬೇಕು, ಇದೂ ಇರಲಿ' ಎಂಬ ಚಾಪಲ್ಯ ನಮ್ಮಲ್ಲಿ ಕೆರಳುತ್ತದೆ; ಅಗತ್ಯದ ಒತ್ತಡಕ್ಕಿಂತ ಆಕರ್ಷಣೆಯ ಪ್ರಭಾವವೇ ಮೂಲ್ಯೆ ಪಡೆಯುತ್ತದೆ. ಹೀಗೆ ಗ್ರಾಹಕನಲ್ಲಿ ಕೊಳ್ಳುಬಾಕ ಪ್ರವೃತ್ತಿಯನ್ನು ಉತ್ತೇಜಿಸಿ, ಅದರಿಂದ ಲಾಭ ಗಳಿಸಬೇಕೆನ್ನುವುದೇ ವಾಣಿಜ್ಯ ಸಂಸ್ಕೃತಿಯ ಮುಖ್ಯ ಉದ್ದೇಶ. ಗ್ರಾಹಕ ಹೆಚ್ಚು ಹೆಚ್ಚು ಕೊಳ್ಳುವ ಇಂಥ ಪ್ರಕ್ರಿಯೆಯನ್ನು 'ಗ್ರಾಹಕ ಕ್ರಾಂತಿ' ಎಂದು ವೈಭವೀಕರಿಸಲಾಗುತ್ತಿದ್ದರೂ ವಾಸ್ತವವಾಗಿ ಅದು ಗ್ರಾಹಕ ದೌರ್ಬಲ್ಯವೇ ಹೊರತು ಬೇರೆಯಲ್ಲ.

ಇಂಥ ಗ್ರಾಹಕ ದೌರ್ಬಲ್ಯವನ್ನು ಉತ್ತೇಜಿಸುವ ಅನೇಕ ಉಪಾಯಗಳೂ ಇಂದಿನ ವಾಣಿಜ್ಯೋದ್ಯಮದಲ್ಲಿ ವಿಜೃಂಭಿಸುತ್ತಿವೆ. ಈ ಹಿಂದೆ ಕೊಳ್ಳುವ ಪದಾರ್ಥಗಳ ಬೆಲೆಯನ್ನು ಹಣದ ರೂಪದಲ್ಲಿ ಸಲ್ಲಿಸಿ, ಪದಾರ್ಥಗಳನ್ನು ಒಯ್ಯಬೇಕಾಗಿತ್ತು. ಇಲ್ಲವೇ, ಅಂಗಡಿಯ ಮಾಲೀಕನ ಔದಾರ್ಯಕ್ಕೆ ಒಳಗಾಗಿ ಕಡತಂದು, ಅನಂತರ ಬಡ್ಡಿ ಸಮೇತ ಕಡ ತೀರಿಸಬೇಕಾಗಿತ್ತು. ಈಗ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸಿ, ಹಣ ಸಂದಾಯ ಮಾಡುವ ಸೌಲಭ್ಯವಿದೆ. ಕಾರು, ರೆಫ್ರಿಜರೇಟರ್ ಮುಂತಾದವುಗಳನ್ನು– ಕಂತುಗಳ ಮೂಲಕ ಬೆಲೆತೆತ್ತು– ಪಡೆಯುವ ಅವಕಾಶವಿದೆ, ಕ್ರೆಡಿಟ್ ಕಾರ್ಡ್‌ಗಳನ್ನು ಪೂರೈಸುವ ಸಂಸ್ಥೆಗಳೂ, ಬೇರೆ ಬೇರೆ ಉದ್ದೇಶಗಳಿಗಾಗಿ ಸಾಲ ಒದಗಿಸುವ ಬ್ಯಾಂಕ್‌ಗಳೂ ಗ್ರಾಹಕನಲ್ಲಿರುವ ದೌರ್ಬಲ್ಯಕ್ಕೆ ಒತ್ತಾಸೆ ನೀಡುತ್ತವೆ. ಇವುಗಳಿಂದ ತನ್ನನ್ನು ತಾನು ಸಾಲಕ್ಕೆ ಒಡ್ಡಿಕೊಂಡು, ಸಂಕಟಕ್ಕೆ ಒಳಗಾಗಬೇಕಾಗಬಹುದೆಂಬ ವಿವೇಕ ಸಾಮಾನ್ಯ ಮನುಷ್ಯನಲ್ಲಿ ಇರುವುದಿಲ್ಲ. ಇಷ್ಟು ಸಾಲದೆಂಬಂತೆ ಪತ್ರಿಕೆಗಳಲ್ಲಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಆಕರ್ಷಕ ಜಾಹಿರಾತುಗಳು ಗ್ರಾಹಕನ ಮೇಲೆ ಪ್ರಭಾವ ಬೀರಿ, ಆತನಲ್ಲಿನ ಕೊಳ್ಳುವ ಚಟಕ್ಕೆ ನೀರೆರೆಯುತ್ತವೆ. ಒಂದು ಕೊಂಡರೆ ಇನ್ನೊಂದು ಉಚಿತ, ನಿರ್ದಿಷ್ಟ ಅವಧಿಯಲ್ಲಿ ಶೇಕಡಾ ಇಷ್ಟು ರಿಯಾಯಿತಿ ಪಡೆಯುವ ಅವಕಾಶ– ಇತ್ಯಾದಿ ಜಾಹಿರಾತುಗಳಂತೂ ಗ್ರಾಹಕನನ್ನು ಭ್ರಮಾಲೋಕಕ್ಕೆ ತಳ್ಳಿ, ಆತನಲ್ಲಿನ ಕೊಳ್ಳುವ ಚಾಪಲ್ಯವನ್ನು ಗರಿಷ್ಠ ಪ್ರಮಾಣಕ್ಕೆ ತರುತ್ತವೆ.

ಹಿಂದೆ ನಮ್ಮ ಜನಪದರಲ್ಲಿ 'ಕಡ ಹುಟ್ಟಿ ಬಡವ ಕೆಟ್ಟ' ಎಂಬ ಗಾದೆ ಮಾತು ಬಳಕೆಯಲ್ಲಿತ್ತು. ಈ ಕಾಲಕ್ಕೂ ಇದು ಅನ್ವಯಿಸುತ್ತದೆ. ಕ್ರೆಡಿಟ್ ಕಾರ್ಡ್, ಕಂತು, ಸಾಲ– ಇತ್ಯಾದಿ ಸೌಲಭ್ಯಗಳಿಂದ ಮರುಳಾಗುವ ಮನುಷ್ಯ ಕೊಳ್ಳುಬಾಕ ಪ್ರವೃತ್ತಿಯನ್ನು ನಿಯಂತ್ರಿಸಿಕೊಳ್ಳಲಾರದೇ ಸಾಲದ ಸುಳಿಗೆ ಸಿಕ್ಕಿ ಹಾಕಿಕೊಳ್ಳುವ ಅಪಾಯಕ್ಕೆ ಸಹಜವಾಗಿಯೇ ಒಳಗಾಗುತ್ತಾನೆ. 'The way to stop financial' 'joy riding' is to arrest the ehauffeur, not the automobile' –ಎಂಬ ವುಡ್ರೋವಿಲ್ಸನ್ ಅವರ ಮಾತನ್ನು ಈ ಸಂದರ್ಭದಲ್ಲಿ ಧ್ಯಾನಿಸಬೇಕಾಗಿದೆ!

■ ವೈನತೇಯ

## ಮಾತೇ ಮುತ್ತು

★ ಜೀವನ ನಿಜಕ್ಕೂ ಸರಳ. ಆದರೆ ಅದನ್ನು ಸಂಕೀರ್ಣಗೊಳಿಸುವಂತೆ ನಾವು ಮಾಡಿಕೊಳ್ಳುತ್ತೇವೆ.

-ಕನ್‌ಫ್ಯೂಸಿಯಸ್

★ ರಸಿಕರೆದೆಯಲ್ಲಿ ಹುಣ್ಣಿಮೆಯ ಹೊಂಬೆಳಕು; ಹನಿಯಲ್ಲಿ ಒಂದು ಹೊಳೆ. ಕವಿತೆ ಮೂಡುವ ತನಕ ನಾವು ಕಾದಿರಬೇಕು.

- ಕೆ ಎಸ್ ನರಸಿಂಹಸ್ವಾಮಿ

★ ಸೆಕ್ಸೀ ಆಗಿ ಕಾಣಿಸಲು ಯಾರೇ ಆದರೂ ಬಟ್ಟೆ ಬಿಚ್ಚಬೇಕಿಲ್ಲ.

-ಸೋನಾಕ್ಷಿ ಸಿನ್ಹಾ

★ ಭೂತಕಾಲದ ಹಳಹಳಿಕೆ ಬೇಡ. ಭವಿಷ್ಯದ ಕನಸೂ ಬೇಡ. ವರ್ತಮಾನದ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸು.

-ಗೌತಮ ಬುದ್ಧ

★ ಪ್ರತಿಯೊಬ್ಬ ಮಗುವೂ ಕಲಾವಿದನೇ. ಆದರೆ ಬೆಳೆದ ಬಳಿಕ ಆ ಕಲಾವಿದನನ್ನು ಉಳಿಸಿಕೊಳ್ಳುವುದು ಹೇಗೆ ಎನ್ನುವುದೇ ಪ್ರಶ್ನೆ.

-ಪಾಬ್ಲೊ ಪಿಕಾಸೊ

★ ಹಳೆಯ ಭಕ್ತಿ ಶ್ರದ್ಧೆಯಳಿಸಿ ಹೋಗಿವೆ ಮಾಸಿ
ಸುಳಿದಿಲ್ಲವಾವ ಹೊಸ ದರ್ಶನದ ಹೊಳವು
ಪಳಗಿದ್ದ ಮನೆಬಿದ್ದ ಕುಂಟ ಕುರುಡನ ತೆರದಿ
ತಳಮಳಿಸುತಿದೆ ಲೋಕ ಮಂಕುತಿಮ್ಮ.

-ಡಿ.ವಿ.ಜಿ

★ ಜೀವನದಲ್ಲಿ ಎರಡು ಮಹತ್ವದ ದಿನಗಳಿವೆ. ಮೊದಲನೆಯದ್ದು ನೀವು ಹುಟ್ಟಿದ ದಿನ. ಎರಡನೆಯದ್ದು ಏಕೆ ಹುಟ್ಟಿದೆ ಎಂದು ಕಂಡುಕೊಂಡ ದಿನ.

-ಮಾರ್ಕ್ ಟ್ವೈನ್

★ ಕಾರಣ ಯಾವತ್ತೂ ಇದ್ದೇ ಇತ್ತು. ಆದರೆ ಅದು ಸಕಾರಣ ಸ್ವರೂಪದಲ್ಲಿ ಇರಲಿಲ್ಲ.

-ಕಾರ್ಲ್ ಮಾರ್ಕ್ಸ್

★ ಪುಸ್ತಕ ಎನ್ನುವುದು ಜಗತ್ತಿನ ಒಂದು ನಿಲುವು. ನಿಮಗೆ ಅದು ಮೆಚ್ಚಿಗೆ ಆಗದಿದ್ದರೆ ಅದನ್ನು ನಿರ್ಲಕ್ಷಿಸಿ. ಅಥವಾ ನಿಮ್ಮದೇ ಆದ ನಿಲುವನ್ನು ಪ್ರಕಟಿಸಿ.

-ಸಲ್ಮಾನ್ ರಶ್ದಿ

★ ಜ್ಞಾನಿಗಳು ತಮ್ಮ ದೋಷವನ್ನು ಮೊದಲು ಕಂಡುಕೊಳ್ಳುತ್ತಾರೆ.

-ಸ್ವಾಮಿ ವಿವೇಕಾನಂದ

★ ನನ್ನ ಹಿಂದೆ ನಡೆಯಬೇಡಿ, ನಾನು ಮುನ್ನಡೆಸುವುದಿಲ್ಲ. ನನ್ನ ಮುಂದೆ ನಡೆಯಬೇಡಿ, ನಾನು ಹಿಂಬಾಲಿಸುವುದಿಲ್ಲ. ನನ್ನ ಪಕ್ಕದಲ್ಲೇ ನಡೆಯಿರಿ, ಗೆಳೆಯರಾಗಿರೋಣ.

-ಆಲ್ಬರ್ಟ್ ಕಾಮೂ

★ ಇಲ್ಲಿಗೇ ಮುಗಿಯಲಿಲ್ಲ ಎಮ್ಮಳಲ ಹೊರೆ.
ಅತ್ತತ್ತು ಕಣ್ಣೀರನೆಲ್ಲ ಬತ್ತಿಸಬೇಡ.
ಮುಂದೆ ದಾರಿಯೊಳೆಮ್ಮನಡ್ಡಗಟ್ಟುವ
ದುಃಖಗಳಿಗಾಗಿ ಅಳಲು ಒಂದಿನಿತು
ಕಣ್ಣೀರಾದರೂ ಇರಲಿ ಎದೆಯ ಅರಳಿನಲಿ.

-ಕುವೆಂಪು

★ ವಯಸ್ಸು ಎಲ್ಲರ ಮೇಲೂ ಪರಿಣಾಮ ಬೀರುತ್ತದೆ. ಬದುಕಿನ ದಾರುಣ ಸತ್ಯಗಳಿಂದ ದೂರ ಓಡಲು ಯತ್ನಿಸುವುದು ವಿಷಾದದ ಸಂಗತಿ. ನಾನು ಎಲ್ಲ ಕಾಲಕ್ಕೂ ಚೆಂದ ಕಾಣಿಸುವುದಿಲ್ಲ ಎನ್ನುವುದೂ ನನಗೆ ಗೊತ್ತಿದೆ.

-ಐಶ್ವರ್ಯಾ ರೈ